CW.9 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.252/2012

| | |
|---|---|
| ಸಾಕ್ಷಿದಾರರ ಹೆಸರು | ಸಿ.ಕೆ ಮಹದೇವಯ್ಯ |
| ತಂದೆಯ ಹೆಸರು | ಕೊಟ್ಟುರಯ್ಯ |
| ವಯಸ್ಸು | 71 ವರ್ಷ |
| ವೃತ್ತಿ | ನಿವೃತ್ತ ಪಿ ಎಸ್ ಐ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 16.02.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ನಾನು ಆರೋಪಿತರನ್ನು ನೋಡಿರುತ್ತೇನೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ.

ನಾನು 02.08.2008 ರಿಂದ 29.11.2013 ರವರೆಗೂ ನಾನು ಪಿ ಎಸ್ ಐ ವಿಶೇಷ ಪೋಲೀಸ ಠಾಣೆ ಅಬಕಾರಿ ಜಾರಿ ಮತ್ತು ಲಾಟರಿ ನಿಷೇದ ಘಟಕ ರಾಮನಗರದಲ್ಲಿ ನನ್ನ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 28.09.2011 ರಂದು ಚಾಸಾ-8 ರವರಿಂದ ನಾನು ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರಿಸಿರುತ್ತೇನೆ. ಕಡತವನ್ನು ಪರಿಶೀಲನೆ ಮಾಡಿ ನಂತರ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ನಾನು ಚಾಸಾ-8 ರವರಿಂದ ಕಡತವನ್ನು ಪಡೆದಾಗ ಪ್ರಕರಣದ ದೂರು ಮತ್ತು ಪ್ರ.ವವ ವನ್ನು ನೋಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ನಾನು ಸೂಕ್ತ ತನಿಖೆಯನ್ನು ಮಾಡದೇ ಒಂದು ಸುಳ್ಳು ಅಂತಿಮ ವರದಿಯನ್ನು ಆರೋಪಿತರ ವಿರುದ್ದ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಪ್ರಕರಣದಲ್ಲಿ ಆರೋಪಿತರು ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಕೇವಲ ಮೇಲಾಧಿಕಾರಿಗಳ ಮಾತನ್ನು ಕೇಳಿ ಅಂಕಿಅಂಶದ ಸಲುವಾಗಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಕಡತದಲ್ಲಿರುವ ದಾಖಲೆಗಳು ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**